


ಹರ್ಟ್ ಮಿ. ಆದರೆ ಮುಕುಂದ ಹೋಗಿ ತಿಂಗಳ ಮೇಲಾಗಿದೆ. ಈ ತಿಂಗಳಲ್ಲಿ ನನಗೆ ಆ ಬಗ್ಗೆ ವ್ಯವಧಾನವಾಗಿ ಯೋಚಿಸಲೂ, ಶಾಂತಿಯಿಂದ ದುಃಖಿಸಲೂ ಸಾಧ್ಯವಾಗಿಲ್ಲ. ಘಟನೆಗಳು ಒಂದಾದ ಮೇಲೊಂದು ಆಗುತ್ತಲೇ ಇವೆ. ಪೊಲೀಸರ ತನಿಖೆ ಒಂದು ಕಡೆ, ಮಾಧ್ಯಮದವರ ಕಾಟ ಮತ್ತು ದಾಂಧಲೆ. ಮುಕುಂದನ ವ್ಯಾಪಾರ, ಅದರ ಸಮಸ್ಯೆಗಳು, ಅದರ ಕಷ್ಟನಷ್ಟ ಮತ್ತು ಅದರ ಸುತ್ತಲಿರುವ ಪಿತೂರಿ. ವ್ಯಾಪಾರದಲ್ಲಿ ಅವನ ಭಾಗವನ್ನು ಅವನು ನನಗೆ ತಿಳಿಸದೆಯೇ ಮಾರಾಟ ಮಾಡಿರುವ ವಿಚಾರ... ಅವನ ಆಸ್ತಿಪತ್ರಗಳು ಸಾಲಗಳ ವ್ಯೂಹದ ಆಕ್ರಮಣ... ಹೀಗೆ ನಡೆಯುತ್ತಿರುವ ದೈನಿಕ ಧಾರಾವಾಹಿಯಲ್ಲಿ ನಾನು ನನ್ನಲ್ಲಿ ಹಣಕಿ ನೋಡಲು ಸಮಯವೂ ಸಿಕ್ಕಿಲ್ಲ, ಸಾಧ್ಯವೂ ಆಗಿಲ್ಲ."

"ಹೌದು ನಿಜ. ನಾನು ಈ ಪ್ರಶ್ನೆಗಳನ್ನು ಕೇಳುತ್ತಿರೋದು ನನ್ನ ಕುತೂಹಲದಿಂದಾಗಿ ಅಲ್ಲ. ಅದೂ ಒಂದೆಡೆ ಇರಬಹುದು. ನಿನ್ನ ಕ್ಷಮೆಯಿರಲಿ. ಆದರೆ ಈ ಸಂಭಾಷಣೆಯನ್ನು ಮುಂದುವರೆಸುವಲ್ಲಿ ನನ್ನ ಒಂದು ಉದ್ದೇಶವಿದೆ."

"ಏನದು?"

"ಈಗ ನೀನು ಏನೇ ಮಾಡಬೇಕಿದ್ದರೂ ಅದಕ್ಕೆ ಸ್ಪಷ್ಟವಾದ ಹಿನ್ನೆಲೆಯನ್ನು ಒದಗಿಸಬೇಕು. ಮುಕುಂದನ ವ್ಯಾಪಾರಕ್ಕೆ ಈಗ ಬಂದಿರುವ ಸವಾಲುಗಳನ್ನು ನೀನು ಎದುರಿಸಬೇಕಾಗಿದೆ. ಅದನ್ನು ಅವನು ಬದುಕಿದ್ದರೆ ಹೇಗೆ ಎದುರಿಸಲಿದ್ದ ಎನ್ನುವುದನ್ನು ಅರ್ಥಮಾಡಿಕೊಳ್ಳೋಣ. ಅಂದರೆ... ಅವನು ಹತಾಶನಾಗಿ ಎಲ್ಲವನ್ನೂ ಕೈಬಿಡುವವನಿದ್ದನೇ ಅಥವಾ ಹೋರಾಡುವವನಿದ್ದನೇ... ಈ ವ್ಯಾಪಾರವನ್ನು ಸ್ಥಾಪಿಸಿ ಬೆಳೆಸಿದ ಮುಕುಂದನೇ ಸೋಲು ಸ್ವೀಕರಿಸಿ ಮೈದಾನವನ್ನು ಬಿಟ್ಟು ಪೆಂಟ್ ಹೌಸಿನಿಂದ ಹಾರಿ ಪ್ರಾಣ ಕಳೆದುಕೊಳ್ಳಲು ತಯಾರಾಗಿದ್ದನಾದರೆ, ಅವನ ಹೆಂಡತಿ, ಕಾಲು ಭಾಗದ ಪಾಲುದಾರಳಾದ ನೀನು ಯಾವುದಕ್ಕಾಗಿ ಹೋರಾಡುತ್ತಿದ್ದೀಯ? ಇದರಲ್ಲಿ ನಾನು ಒಂದು ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ತನ್ಮೂಲಕ ನೀನು ಅರ್ಥವನ್ನು ಕಂಡುಕೊಳ್ಳಬಹುದೇನೋ..."

"ನಿನ್ನ ಪ್ರಶ್ನೆಯೂ ಸರಿಯಾದದ್ದೇ. ನಾನು ಈ ವ್ಯಾಪಾರದಲ್ಲಿ ಪಾಲುಹೊಂದಿದ್ದೆ. ಅದು ನಿಜ. ಆದರೆ ಯಾವತ್ತಿಗೂ ಇದು ನನ್ನ ವ್ಯಾಪಾರವಾಗಿರಲಿಲ್ಲ. ಒಂದು ಡಿಸೈನ್ ಸಂಸ್ಥೆ ನಡೆಸುವುದಕ್ಕೆ ಸೃಜನಶೀಲರು ಬೇಕು. ನಾನೇನಿದ್ದರೂ ಮಾರಾಟವನ್ನು ಮಾತ್ರ ನೋಡಿಕೊಳ್ಳುತ್ತಿದ್ದ ಫೂಟ್ ಸೋಲ್ಜರು. ಮುಕುಂದನ ಜೊತೆಗಿದ್ದುದರಿಂದ ಡಿಸೈನಿನ ಬಗ್ಗೆ ಸ್ವಲ್ಪ ಪರಿಚಯವಿತ್ತಾದರೂ ಅದು ರಕ್ತಗತವಾಗಲಿಲ್ಲ. ಐ ಡೋಂಟ್ ಬಿಲಾಂಗ್ ಟು ದಿಸ್ ಬಿಸಿನೆಸ್. ಸಾಮಾನ್ಯ ಪರಿಸ್ಥಿತಿಯಲ್ಲಾಗಿದ್ದರೆ ನಾನು ಈ ವ್ಯಾಪಾರವನ್ನು ಸುಮ್ಮನೆ ಬಿಟ್ಟುಕೊಡುತ್ತಿದ್ದೆ, ಅಷ್ಟೇ. ಆದರೆ ಈಗಿನ ಪರಿಸ್ಥಿತಿಯಲ್ಲಿ — ನಮ್ಮ ವ್ಯಾಪಾರಕ್ಕೆ ಆಗುತ್ತಿರುವ ಅನ್ಯಾಯವನ್ನು ಕಂಡ ನಂತರವೂ ಇದನ್ನು ಬಿಟ್ಟುಕೊಟ್ಟು ದಗಾಕೋರರಿಗೆ ಶರಣಾಗಬೇಕೇ? ನೀನೇ ಹೇಳು?"

"ಇದು ನಿನ್ನ ತೀರ್ಮಾನ. ನಿನ್ನ ಮೌಲ್ಯಗಳಿಗೆ ಸಂಬಂಧಿಸಿದ್ದು. ಈ ಸಂಭಾಷಣೆಯು ಕೇವಲ ನಿನ್ನನ್ನು ನೀನು ನಿನಗೇ ಬಿಚ್ಚಿಕೊಂಡು ನಿನ್ನ ಮನಸ್ಸನ್ನು ನೀನೇ ಅರ್ಥಮಾಡಿಕೊಳ್ಳುವುದಕ್ಕೆ ಪೂರಕವಾಗುತ್ತದೆ ಅಷ್ಟೇ."

"ನಿಜ. ಇದು ನಾನು ನನ್ನೊಳಗೇ ನಡೆಸಬೇಕಾದ ಮಾತುಕತೆ. ಇಷ್ಟೂ ದಿನ ಏನೂ ಯೋಚಿಸದೇ ಬರೇ ನನ್ನ ಸುತ್ತಮುತ್ತಲಿನ ಘಟನೆಗಳಿಗೆ ಚಟುವಟಿಕೆಗಳಿಗೆ ಪ್ರತಿಕ್ರಿಯಿಸುತ್ತಿದ್ದೆ ಅಷ್ಟೇ. ಈಗ...?"

"ಈಗೇನು?"

"ಪರಿಸ್ಥಿತಿ ನಿನಗೇ ಗೊತ್ತು. ಮುಕುಂದನ ಆ ಪತ್ರದಲ್ಲೂ ವಿಷಯದ ಬಗ್ಗೆ ಸೂಚನೆಯಿದೆ. ಅವನು ವ್ಯಾಪಾರದ ವಿಷಯಕ್ಕೆ ಈ ಇಬ್ಬರ ಪಿತೂರಿಯ ಭಾಗವಾಗಿದ್ದ. ನನಗೆ ಹೇಳದೆಯೇ ತನ್ನ ಪಾಲನ್ನು ಮಾರಿಹಾಕಿದ್ದ. ಅದು ಅವನು ಅವರುಗಳ ಬಗ್ಗೆ ತೋರಿಸದ ಮೂಢನಂಬಿಕೆಯೂ ಇರಬಹುದು. ಅವರುಗಳ ಜೊತೆಗೂಡಿ ವ್ಯಾಪಾರವನ್ನು ತೀವ್ರಗತಿಯಲ್ಲಿ ಬೆಳೆಸುವ ಮಹತ್ವಾಕಾಂಕ್ಷೆಯೂ ಇರಬಹುದು. ಹೆಸರು ಅವನದ್ದೇ ಆಗಿತ್ತು. ಮಾಲಿಕತ್ವ ಬದಲಾಗಿತ್ತು. ಆ ಹೆಸರು ವಿಶ್ವವ್ಯಾಪಿಯಾಗುವ ಸಾಧ್ಯತೆ ಅವನಿಗೆ ಕಂಡಿತ್ತು. ವ್ಯಾಪಾರ ವಿಶ್ವವ್ಯಾಪಿಯಾಗಿ ತನ್ನ ಹೆಸರು ಒಂದು ಬ್ರಾಂಡಾಗಿ ನಿಲ್ಲುವುದರ ಬಗ್ಗೆ ಅವನು ಹಲವು ಬಾರಿ ಮಾತಾಡಿದ್ದ. ಬಹುಶಃ ಮಾಲೀಕತ್ವಕ್ಕಿಂತ ಹೆಸರೇ ಮುಖ್ಯವಾಗಿತ್ತೇನೋ."

"ಅಷ್ಟು ಮಹತ್ವಾಕಾಂಕ್ಷೆಯಿದ್ದವನು ಇಷ್ಟು ಹತಾಶನಾಗಿ ಪ್ರಾಣತ್ಯಾಗ ಮಾಡಿದ ಅನ್ನುತ್ತೀಯಾ? ನಿಜಕ್ಕೂ ಪ್ರಾಣ ತೆಗೆದುಕೊಳ್ಳುವ ಇರಾದೆ ಅವನಿಗಿತ್ತಾ. ಹೆಸರಿಗೇ ಪ್ರಾಮುಖ್ಯತೆಯನ್ನು ಕೊಡುತ್ತಿದ್ದವನು ತನ್ನ ಹೆಸರು ಸಂಪೂರ್ಣವಾಗಿ ನಾಶವಾಗುವ... ಬ್ರಾಂಡು ಛಿದ್ರವಾಗುವ ಹಾಗೆ ಯಾಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ ಎಂದು ಒಂದು ಕ್ಷಣದ ಮಟ್ಟಿಗಾದರೂ ಯೋಚಿಸಿದೆಯಾ... ಅಕಸ್ಮಾತ್ ಕುಶಾಲಿಗೆ ಆ ಪತ್ರವನ್ನು ಎಕ್ಸ್‌ಪರಿಮೆಂಟಲ್ ಆಗಿ ಡ್ರಾಫ್ಟ್ ಮಾಡಿದ್ದರೆ? ಅವನಾಗೇ ಪ್ರಾಣ ತೆಗೆದುಕೊಳ್ಳಲಿಲ್ಲ ಅನ್ನುವುದನ್ನು ನೀನೀಗ ಖಾತ್ರಿ ಮಾಡಿ ಹೇಳಿರುವೆಯಲ್ಲ."

"ಕುಶಾಲಿಗೆ ಯಾರಾದರೂ ಸೂಯಿಸೈಡ್ ನೋಟ್ ಬರೀತಾರಾ? ನಾನು ಅವನ ಹೆಂಡತಿ, ಗೆಳತಿ. ಅವನು ತುಂಬಾ ಒತ್ತಡದಲ್ಲಿದ್ದ ಅನ್ನೋದು ನನಗೆ ಗೊತ್ತು. ಅದು ನಿಜ. ಅವನ ಮಹತ್ವಾಕಾಂಕ್ಷೆಯ ಬಗ್ಗೆ ನಾವು ಹಲವು ಬಾರಿ ಮಾತಾಡಿದ್ದೆವು. ಯಾಕೆ ಈ ಮರೀಚಿಕೆಯ ಬೆನ್ನು ಹತ್ತಿದ್ದಾನೆ ಅನ್ನುವುದು ಬಹುಶಃ ಅವನಿಗೇ ಗೊತ್ತಿರಲಿಲ್ಲ. ಅವನ ಮಹತ್ವಾಕಾಂಕ್ಷೆಯನ್ನು ಆ ಇಬ್ಬರೇ ಉದ್ದೀಪಿಸಿದ್ದಿರಬಹುದು. ಡಿಸೈನ್ ಬಗ್ಗೆ ಸಾಂಪ್ರದಾಯಿಕವಾಗಿ ತಾಲೀಮು ಪಡೆದಿದ್ದ ಈ ಜೋಡಿ ಅವನ ಜೀವನದಲ್ಲಿ ಪ್ರವೇಶಿಸಿತ್ತು. ಜೀವನದಲ್ಲಿ ಅನ್ನಬೇಕೋ ಅಥವಾ ವ್ಯಾಪಾರದಲ್ಲಿ ಅನ್ನಬೇಕೋ ಗೊತ್ತಿಲ್ಲ. ಆದರೆ ಅವನಿಗೆ ವ್ಯಾಪಾರವೇ ಜೀವನವಾಗಿತ್ತು. ನಾನು ವರ್ಷಾನುಗಟ್ಟಲೆಯಿಂದ ಮಾರುಕಟ್ಟೆಯ ವಿಭಾಗದ ಮುಖ್ಯಸ್ಥಳಾಗಿ ಆಡುತ್ತಿದ್ದ ಮಾತುಗಳಿಗೂ ಈ ಜೋಡಿಯ ಮಾತುಗಳಿಗೂ ಮೂಲಭೂತ ಫರಕ್ ಇದ್ದಿರಬಹುದು. ಅವರಿಬ್ಬರ ಜೊತೆಗೂಡಿ ವ್ಯಾಪಾರವನ್ನು ತೀವ್ರಗತಿಯಲ್ಲಿ ಬೆಳೆಸಬಹುದು ಅನ್ನುವ ಇರಾದೆ ಅವನಿಗಿದ್ದಿರಬಹುದು. ಇಲ್ಲವಾದರೆ ಅವನು ಏನೆಲ್ಲಾ ಮಾಡಿದನೋ ಅದನ್ನು ಯಾಕೆ ಮಾಡುತ್ತಿದ್ದ? ಜೊತೆಯಾಗಿ ವ್ಯಾಪಾರ ಮಾಡಬೇಕೆಂದು, ಬೆಳೆಸಬೇಕೆಂದು ಸಹಯಾತ್ರಿಗಳಾಗಿ ಜೊತೆಜೊತೆಗೇ ಹೆಜ್ಜೆಯಿಕ್ಕುತ್ತಿದ್ದವರು ಅವನನ್ನು ಆ ಕಡಿದಾದ ದಾರಿಯಿಂದ ತಳ್ಳಿಬಿಟ್ಟರೇ...? ಗೊತ್ತಿಲ್ಲ. ಅವರು ತಳ್ಳಿದರು — ಇವನು ಬಿದ್ದ ಎನ್ನುವುದಾದರೆ ಇದ್ದುದು ಎರಡೇ ಆಯ್ಕೆಗಳು... ಎದ್ದು ಹೋರಾಡುವುದು, ಎಲ್ಲವನ್ನೂ ಬಿಟ್ಟು ಗೆಲ್ಲುವ ಬಾಹುಬಲಿಯಾಗುವುದು. ನನಗೆ ಗೊತ್ತಿಲ್ಲ."

"ಇದು ಒಳ್ಳೆಯ ಪ್ರಶ್ನೆ. ಮತ್ತೊಂದನ್ನು ಕೇಳುತ್ತೇನೆ. ನಿನ್ನ ಪ್ರಶ್ನೆಗೆ ಉತ್ತರ ಸಿಗಬಹುದು. ಆ ಪಾರಿವಾಳದ ಘಟನೆ ನಡೆಯದೇ, ಮುಕುಂದ ಆಯ ತಪ್ಪದಿದ್ದರೆ ಸಾಧ್ಯತೆಗಳೇನಿದ್ದುವು. ಕೌಂಟರ್ ಫ್ಯಾಕ್ಚುವಲ್ಸ್?"

"ಬೇಡ. ಆ ದಾರಿಯಲ್ಲಿ ಹೋಗೋದು ಬೇಡ. ಅವನು ಅಂದು ಅಲ್ಲಿಂದ ಹಾರಲು ತಯಾರಿದ್ದ ಎಂದೇ ನಂಬಬೇಕು. ಇಲ್ಲವಾದರೆ ಯಾವತ್ತೂ ಇಲ್ಲದೇ ಕಾಲು ಆಚೆಬದಿಗೆ ಯಾಕೆ ಹಾಕಿ ಕೂರುತ್ತಿದ್ದ?"

"ನಿಜಕ್ಕೂ ಅವನು ಸಾಯಲು ಮನಸ್ಸು ಮಾಡಿದ್ದ ಅಂತ ನಿನಗನ್ನಿಸಿರಲೇಬೇಕು. ನೀನು ಇನ್ನೂ ಇದನ್ನು ಸೂಯಿಸೈಡ್ ಅಂತಲೇ ನಂಬುತ್ತಿದ್ದೀಯ. ಅದು ಅಪಘಾತ ಅನ್ನುವುದು ಕೇವಲ ಸಂದರ್ಭೋಚಿತ ಅಂತ ನಂಬಿದ್ದೀಯ. ಎಟ್ ದ ಕೋರ್ ಇದು ಸೂಯಿಸೈಡ್. ಹಾಗಂತ ನಂಬಿಯೇ ಮುಂದುವರೆಯುತ್ತಿದ್ದೀಯ."

"ಇರಬಹುದು. ಹೌದು. ನಿಜವೇ. ಇದನ್ನು ನಾನು ಅಪಘಾತ ಅಂತ ಇನ್ನೂ ಪರಿಗಣಿಸಿಲ್ಲವೇನೋ. ಯಾಕಂದರೆ ಅವನು ಯಾವ ರೀತಿಯಿಂದ ಬಿದ್ದ ಅನ್ನುವುದನ್ನು ನಿನಗೆ ಮಾತ್ರ ಹೇಳಿದ್ದೇನೆ. ಮಿಕ್ಕಂತೆ ಜಗತ್ತು ನಂಬಿದ್ದನ್ನೇ ನಾನೂ ನಂಬಿದ್ದೇನೆ..."

"ಈ ಕಥೆಯನ್ನು ಪೊಲೀಸಿನವರಿಗೂ ಹೇಳಿಲ್ಲ, ಅಲ್ಲವಾ?"

"ಹೌದು. ಅವರ ದಾಖಲೆಗಳ ಪ್ರಕಾರ ನಾನು ಆ ಜಾಗದಲ್ಲಿ ಇರಲೇ ಇಲ್ಲ. ದಾಖಲೆಗಳ ಪ್ರಕಾರ